# ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬೀದರ, ಸಿಟ್ಟಿಂಗ್ ಅಟ್ ಭಾಲ್ಕಿ

ಎಸ್.ಸಿ. ಸಂಖ್ಯೆ: 93/2022

**ಪ್ರಾಸಾ–3**
**ಚಾಸಾ–2**

| | | |
|---|---|---|
| ಸಾಕ್ಷಿದಾರನ ಹೆಸರು | : | ಶಿವರಾಜ |
| ತಂದೆ/ಗಂಡನ ಹೆಸರು | : | ನಾಗಪ್ಪಾ ಗೊಕುಲೆ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ವಕ್ಕಲುತನ |
| ವಾಸಸ್ಥಳ | : | ರುದನೂರ |

ದಿನಾಂಕ: **19.7.2025** ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು :

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ :**

1. ಚಾಸಾ 3 ಗೊತ್ತಿಲ್ಲ. ಚಾಸಾ 1 ನಮ್ಮ ಊರಿನವರು. ಸಾಕ್ಷಿಗೆ ನಿಪಿ 1 ನ್ನು ತೋರಿಸಿದ್ದರು ಅವರು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ಈಗ ನಿಪಿ ನಿಪಿ1(ಬಿ) ಎಂದು ಗುರುತಿಸಲಾಯಿತು. ನಾಲ್ಕು ವರ್ಷದ ಹಿಂದೆ ನಮ್ಮ ಹೊಲದಲ್ಲಿ ಸದರಿ ಸಹಿ ಮಾಡಿರುತ್ತೇನೆ. ಪೊಲೀಸರು ನಮ್ಮ ಹೊಲಕ್ಕೆ ಬಂದು ಹೊಲ ಯಾರದು ಎಂದು ಕೇಳಿ ನನ್ನ ಸಹಿ ಪಡೆದುಕೊಂಡರು. ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ. ಸಾಕ್ಷಿಯು ನಿಪಿ2 ನ್ನು ನೋಡಿ ಸದರಿ ಫೋಟೋದಲ್ಲಿ ತಾನು ಇರುವುದಾಗಿ ಗುರುತಿಸಿರುತ್ತಾರೆ. ಹೊಲದಲ್ಲಿ ಸದರಿ ಫೋಟೋ ತೆಗೆದರು. ಚಾಸಾ 1 ರವರ ಮಾವನಿಗೆ ಹೊಡೆದಿದ್ದಾರೆ ಎಂಬ ವಿಚಾರದಲ್ಲಿ ಸಹಿ ಪಡೆದುಕೊಂಡರು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲವೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಸಾಕ್ಷವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದ :**

2. ರೂದನೂರು ಖಾನಾಪೂರ ಮುಖ್ಯ ರಸ್ತೆಯಲ್ಲಿ ನಿಪಿ 1 ರಂತೆ ಪಂಚನಾಮೆ ಮಾಡಿದ್ದು ಆಗ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ಆಗ ಸಂಜೆ 5 ರಿಂದ 6 ಗಂಟೆಯಾಗಿತ್ತು ಎಂದರೆ ಸರಿ. ಆಗ ನಿಪಿ 2 ರಂತೆ ಫೋಟೋ ತೆಗೆದರು ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ವಕೀಲರಿಂದ** :

3. ನಿಪಿ 1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಸಹಿ ಮಾಡು ಎಂದು ಹೇಳಿದರಿಂದ ಸಹಿ ಮಾಡಿದ್ದೇನೆ ಮತ್ತು ಫೋಟೋ ತೆಗೆಸಿಕೋ ಎಂದಿದರಿಂದ ಫೋಟೋ ತೆಗೆಸಿಕೊಂಡಿದ್ದೇನೆ.

ಮರು ವಿಚಾರಣೆ ಇಲ್ಲ.

(ಸಾಕ್ಷಿ ನೀಡಿದ ವಿಚಾರಣೆಯನ್ನು ನನ್ನ ಉಕ್ತಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ. ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೀದರ, ಸಿಟ್ಟಿಂಗ್ ಅಟ್ ಭಾಲ್ಕಿ.